# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 22-08-2022

## ಜನವಾಡಾ ಪೊಲೀಸ್ ಠಾಣೆ ಯು.ಡಿ.ಆರ್ ಪ್ರಕರಣ ಸಂಖ್ಯೆ : 13/2022 ಕಲಂ 174 (ಸಿ) ಸಿ.ಆರ್.ಪಿ.ಸಿ :-

ದಿನಾಂಕ: 21/08/2022 ರಂದು ಫಿರ್ಯಾದಿ ಶ್ರೀ ಕಾಶೆಪ್ಪಾ ತಂದೆ ಮಹಾರುದ್ರಪ್ಪಾ ಆಲೂರೆ ಸಾ: ಮರಕಲ್ ಗ್ರಾಮ ರವರಿಗೆ ವಿಚಾರಿಸಿದ್ದು ಸದರಿಯವರು ದೂರು ಸಾರಾಂಶವೇನೆಂದರೆ, ನಾನು ಒಕ್ಕಲುತನ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ಮಹೇಶ ಅಂತ ಒಬ್ಬ ಗಂಡು ಮಗನಿದ್ದು, ಸುಮಾರು 12 ರ್ಷಗಳ ಹಿಂದೆ ಅವನಿಗೆ ಲಗ್ನ ಮಾಡಿದ್ದು ಅವನಿಗೆ ಎರಡು ಗಂಡು, ಒಬ್ಬಳು ಹೆಣ್ಣು ಮಗಳಿರುತ್ತಾಳೆ. ಅವನ ಹೆಂಡತಿ ಶಿಲ್ಪಾ ಇವಳು ಕೂಲಿಕೆಲಸ ಮಾಡುತ್ತಾಳೆ. ನನ್ನ ಮಗ ಮಹೇಶ ಇವನು ಸುಮಾರು 4 ರ್ಷಗಳಿಂದ ತನ್ನ ಹೆಂಡತಿ ಶಿಲ್ಪಾ ಮತ್ತು ಮಕ್ಕಳೊಂದಿಗೆ ಗ್ರಾಮದಲ್ಲಿಯೇ ಬೇರೆ ಮನೆ ಮಾಡಿಕೊಂಡು ಇದ್ದನು. ದಿನಾಂಕ: 20/08/2022 ರಂದು ಮಧ್ಯಾಹ್ನ ನನ್ನ ಸೊಸೆ ಶಿಲ್ಪಾ ಇವಳು ಅಡಿಗೆ ಕೆಲಸ ಮಾಡಲು ಆಂದ್ರದ ಬುಧೆರಾಕ್ಕೆ ಹೋಗಿರುತ್ತಾಳೆ. ರಾತ್ರಿ 8 ಗಂಟೆ ಸುಮಾರಿಗೆ ನನ್ನ ಮಗ ಮಹೇಶ ಇವನು ಮನೆಗೆ ಬಂದು ಹಾಲು ಹಿಂಡಿ ಚಹಾ ಕುಡಿದು ಮಕ್ಕಳಿಗೆ ನಮ್ಮ ಮನೆಯಲ್ಲಿಯೇ ಬಿಟ್ಟು ತನ್ನ ಮನೆಗೆ ಹೋಗುತ್ತೇನೆ ಅಂತ ಹೇಳಿ ಹೋಗಿರುತ್ತಾನೆ. ತಡರಾತ್ರಿ ಶಶಿಕುಮಾರ ಮಳಗೆ ಇವರು ನಮ್ಮ ಮನೆಗೆ ಬಂದು ನಿಮ್ಮ ಮಗ ಮಹೇಶ ಇವನ ಮನೆಯ ಬಾಗಿಲು ತೆರೆದಿದ್ದು ಇರುತ್ತದೆ ಅಂತ ತಿಳಿಸಿದ್ದರಿಂದ ರಾತ್ರಿ 2 ಗಂಟೆ ಸುಮಾರಿಗೆ ನಾನು ಮಹೇಶ ಹೋಗಿ ನೋಡಲು ಮಹೇಶ ಇವನು ತನ್ನ ಮನೆಯಲ್ಲಿರುವ ಪಲ್ಲಂಗ ಮೇಲೆ ಮಲಗಿಕೊಂಡಿದ್ದು ಮಾತನಾಡಿಸಿದ್ದು ಮಾತನಾಡಲಿಲ್ಲ. ಮೈ ಪೂರ್ತಿಯಾಗಿ ಬೆವರು ಬಿಟ್ಟಿತ್ತು. ಪಕ್ಕದಲ್ಲೇ ವಾಂತಿ ಮಾಡಿಕೊಂಡಿದ್ದು ಮೂಗಿನಿಂದ ಬೂರುಗು ಬರುತ್ತಿತ್ತು. ಕೂಡಲೇ ನಾನು ಮತ್ತು ನನ್ನ ತಮ್ಮನ ಮಗನಾದ ಉದಯಕುಮಾರ ಕೂಡಿ ಅಂಬುಲೆನ್ಸದಲ್ಲಿ ಬೀದರ ಸರಕಾರಿ ಆಸ್ಪತ್ರೆಗೆ ತಂದಿದ್ದು, ಡಾಕ್ಟರ ರವರು ನನ್ನ ಮಗ ಮಹೇಶ ಇವನಿಗೆ ಪರಿಶೀಲಿಸಿ ಮೃತಪಟ್ಟಿರುತ್ತಾನೆ ಅಂತ ತಿಳಿಸಿರುತ್ತಾರೆ. ನನ್ನ ಮಗ ಮಹೇಶ ಇವನು ಯಾವುದೋ ಕಾರಣಕ್ಕೆ ವಿಷ ಕುಡಿದು ಮೃತಪಟ್ಟಂತೆ ಕಂಡು ಬಂದಿರುತ್ತದೆ. ನನ್ನ ಮಗನ ಸಾವಿನಲ್ಲಿ ಸಂಶಯವಿರುತ್ತದೆ. ಕಾರಣ ಈ ಬಗ್ಗೆ ಕಾನೂನಿನ ಕ್ರಮ ಜರುಗಿಸಲು ವಿನಂತಿ ಅಂತ ಕೊಟ್ಟ ಫರ್ಯಾದು ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ

## ಕಮಲನಗರ ಪೊಲೀಸ್ ಠಾಣೆ ಯು.ಡಿ.ಆರ್ ಪ್ರಕರಣ ಸಂಖ್ಯೆ : 06/2022 ಕಲಂ. 174 ಸಿ.ಆರ್.ಪಿ.ಸಿ :-

ದಿನಾಂಕ 21/08/2022 ರಂದು 1030 ಗಂಟೆಗೆ ಶ್ರೀ ಯಾಕುಬಖಾನ ತಂದೆ ಇಬ್ರಾಹಿಂ ಪಟೇಲ ವಯ 43 ಜ್ಯಾತಿ ಮುಸಿಂ ಉ// ಸಹ ಶಿಕ್ಷಕ ಸಾ// ಡೋಣಗಾಂವ(ಎಮ್) ರವರು ಠಾಣೆಗೆ ಹಾಜರಾಗಿ ದೂರು ಸಲ್ಲಿಸಿದ್ದು ಸಾರಾಂಶವೇನೆಂದರೆ ದಿನಾಂಕ 21/08/2022 ರಂದು 0800 ಗಂಟೆಗೆ ನಮ್ಮ ತಾಯಿ ಹಫಿಜಾಬಿ ಹಾಗು ನಮ್ಮೂರ ಪ್ರೇಮದಾಸ ತಂದೆ ಮಷ್ಣಾಜಿ ಮೇತ್ರೆ, ಅವರ ಟ್ರಾಕ್ಟರ ನಂ ಕೆಎ 38 ಟಿ 2722 ನೇದ್ದಕ್ಕೆ ಔಷಧ ಹೊಡೆಯುವ ಮಸಿನ್ ತೆಗೆದುಕೊಂಡು ನಮ್ಮ ಹೊಲದ ರ್ವೆ ನಂ 91 ನೇದ್ದರಲ್ಲಿ ಇರುವ ಸೊಯಾಬೆಳೆಗೆ ಔಷಧ ಹೊಡೆಯಲು ಹೊಗಿದ್ದಾಗ ಟ್ರಾಕ್ಟರ ಮಾಲಿಕ ಪ್ರೇಮದಾಸ ಇತನು ಔಷಧ ಹೊಡೆಯಲು ಮಷಿನ ಚಾಲು ಮಾಡಿ ನಮ್ಮ ಹೊಲದಲ್ಲಿ ಸೊಯಾ ಬೆಳೆಗೆ

ಔಷಧ ಹೊಡೆಯುತ್ತಿರುವಾಗ ಅಂದಾಜು ಬೆಳಿಗ್ಗೆ 9 ಗಂಟೆ ಸುಮಾರಿಗೆ ನಮ್ಮ ತಾಯಿ ಹಫಿಜಾಬೀ ಇವಳು ಟ್ಯಾಂಕನಲ್ಲಿ ನೀರು ಇದೆಯಾ ಇಲ್ಲಾ ಅಂತಾ ನೋಡುತ್ತಿರುವಾಗ ಗಾಳಿ ಜೋರಾಗಿ ಬಿಸಾಡುತ್ತಿದ್ದರಿಂದ ನಮ್ಮ ತಾಯಿಯ ಸಿರೆಯನ್ನು ಔಷಧ ಹೊಡೆಯುವ ಮಷಿನ್ನ ಪಟ್ಟಿ ಅಥವಾ ಬೆಲ್ಟಗೆ ತಾಗಿ ಒಮ್ಮೆಲೆ ನಮ್ಮ ತಾಯಿಯ ಸಿರೆಯನ್ನು ಮಷಿನಗೆ ಸುತ್ತಿಕೊಂಡು ನಮ್ಮ ತಾಯಿಯ ಹೊಟ್ಟೆಯಲ್ಲಿರುವ ಕರಳು ಹೊರಗೆ ಬಂದು ಸ್ಥಳದಲ್ಲಿ ಮರಣ ಹೊಂದಿರುತ್ತಾಳೆ. ಈ ಘಟನೆಯು ಆಕ್ಸಮಿಕವಾಗಿ ಜರುಗಿರುತ್ತದೆ. ಈ ಬಗ್ಗೆ ಯಾರ ಮೇಲೆ ಯಾವುದೇ ತರಹದ ಸಂಶಯ ವಿರುವುದಿಲ್ಲಾ  ಈ ಬಗ್ಗೆ ಕಾನೂನು ಕ್ರಮ ಜರುಗಿಸಲು ವಿನಂತಿ ಇರುತ್ತದೆ. ಅಂತಾ ನೀಡಿದ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಂಡಿದ್ದು ಇರುತ್ತದೆ

**ಹೊಕ್ರಾಣಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 0053/2022 ಕಲಂ 363 ಐಪಿಸಿ :-**

ದಿನಾಂಕ 21/08/2022 ರಂದು 1430 ಗಂಟೆಗೆ ಫಿರ್ಯಾದಿ ಶ್ರೀ ನಬೀಸಾಬ ತಂದೆ ರಾಜಾಸಾಬ ಶೇಖ ವಯ 37 ರ್ಷ ಜಾತಿ ಮುಸ್ಲಿಂ ಉ; ಒಕ್ಕಲುತನ ಸಾ; ಚೊಂಡಿ ಮುಖೇಡ ರವರು ಠಾಣೆಗೆ ಹಾಜರಾಗಿ ದೂರು ರ್ಜಿ ಕೊಟ್ಟಿದ್ದು ಸಾರಾಂಶವೆನೆಂದರೆ ನನಗೆ 1) ಸೋಯಲ್ 2) ಸುಹಾನಾ 3) ಶೈಲಾನಿ ಹೀಗೆ ಎರಡು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಒಟ್ಟು 3 ಜನ ಮಕ್ಕಳು ಇರುತ್ತಾರೆ. ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಶಬಾನಾ ಹಾಗು ಮೂವರು ಮಕ್ಕಳೊಂದಿಗೆ ವಾಸವಾಗಿರುತ್ತೆನೆ. ಹೀಗಿರುವಾಗ ದಿನಾಂಕ 16/08/2022 ರಂದು ರಾತ್ರಿ 8-30 ಗಂಟೆಯ ಸುಮಾರಿಗೆ ನಾನು ಮತ್ತು ನನ್ನ ಹೆಂಡತಿ ಶಬಾನಾ ಹಾಗು ಮೂವರು ಮಕ್ಕಳು ಎಲ್ಲರೂ ಊಟ ಮಾಡಿದೆವು. ನಂತರ ನಾನು ಮತ್ತು ನನ್ನ ಹೆಂಡತಿ ಶಬಾನಾ ಮಕ್ಕಳು ಸೋಯಲ್ ಹಾಗು ಶೈಲಾನಿ ಎಲ್ಲರೂ ಮಲಗಿಕೊಂಡಿರುತ್ತೆವೆ. ಮಗಳು ಸುಹಾನಾ ಇವಳು ಮನೆಯಲ್ಲಿ ಒದುತ್ತಾ ಕುಳಿತ್ತಿದ್ದಳು. ನಂತರ ನಾನು ದಿನಾಂಕ 17/08/2022 ರಂದು ಬೆಳಗ್ಗೆ 04-00 ಗಂಟೆಯ ಸುಮಾರಿಗೆ ನಮಾಜ್ ಬಿಳಲು ಎದ್ದಿದ್ದಾಗ ನನ್ನ ಮಗಳು ಸುಹಾನಾ ಇವಳು ಮನೆಯಲ್ಲಿ ಇರಲಿಲ್ಲಾ ನಂತರ ನನ್ನ ಹೆಂಡತಿ ಶಬಾನಾ ಹಾಗು ಹಿರಿಯ ಮಗ ಸೊಯಲ್ ಇವರಿಗೆ ಎಬ್ಬಿಸಿ ಸುಹಾನಾ ಇವಳು ಮನೆಯಲ್ಲಿ ಕಾಣಿಸುತ್ತಿಲ್ಲಾ ಅಂತ ಹೇಳಿದಾಗ ಅವರು ಎದ್ದು ನೊಡಿರುತ್ತಾರೆ. ನಂತರ ನಾನು ಮತ್ತು ನನ್ನ ಹೆಂಡತಿ ಶಬಾನಾ. ಹಿರಿಯ ಮಗ ಸೊಯಲ್ ಹಾಗು ನಮ್ಮೂರ ಮೊಹೀನ್ ತಂದೆ ಮೈನುದ್ದಿನ ಶೇಖ ಮತ್ತು ರಿಯಾಜ್ ತಂದೆ ವಜೀರಸಾಬ ಶೇಖ ಎಲ್ಲರೂ ಕೂಡಿ ಸುಹಾನಾ ಇವಳಿಗೆ ನಮ್ಮ ಓಣಿಯಲ್ಲಿ ಹಾಗು ಗ್ರಾಮದಲ್ಲಿ ಎಲ್ಲಾ ಕಡೆ ಹುಡುಕಾಡಿದೆವು ಅವಳು ಸಿಗಲಿಲ್ಲಾ ನಂತರ ನಮ್ಮಗೆ ಗೊತ್ತಾಗಿದೆನೆಂದರೆ ನನ್ನ ಮಗಳು ಸುಹಾನಾ ಇವಳಿಗೆ ದಿನಾಂಕ 16/08/2022 ರಂದು ರಾತ್ರಿ 11-00 ಗಂಟೆಯಿಂದ ದಿನಾಂಕ 17/08/2022 ರಂದು ಬೆಳಗ್ಗೆ 04-00 ಗಂಟೆಯ ಅವಧಿಯಲ್ಲಿ ಯಾರೋ ಅಪಹರಿಸಿಕೊಂಡು ಹೊಗಿರುತ್ತಾರೆ. ನಮ್ಮ ಮಗಳಿಗೆ ನಾವು ಗ್ರಾಮದಲ್ಲಿ ಎಲ್ಲಾ ಕಡೆ ಹುಡುಕಾಡಿದೆವು ನಂತರ ಮುಕ್ರುಮಬಾದ. ಉದಗೀರ (ಎಮ್.ಎಸ್) ಕಾಳಗಾಪೂರ. ಹೈದ್ರಾಬಾದ. ಹಳಣಿ. ರಾವಣಕೋಳಾ. ಬಾರಾಹಳ್ಳಿ ಹೊಗಿ ನಮ್ಮ ಸಂಬಂಧಿಕರವರಿಗೆ ಸುಹಾನಾ ಇವಳ ಬಗ್ಗೆ ವಿಚಾರಿಸಲು ಸಂಬಂಧಿಕರು ಸುಹಾನಾ ಇವಳು ನಮ್ಮ ಮನೆಗೆ ಬಂದಿರುವುದಿಲ್ಲಾ ಅಂತ ತಿಳಿಸಿರುತ್ತಾರೆ. ನಾವು ಎಲ್ಲಾ ಕಡೆ ಹುಡುಕಾಡಿದರು ನಮ್ಮ ಮಗಳು ಸಿಕ್ಕಿರುವುದಿಲ್ಲಾ

ನಮ್ಮ ಮಗಳು 17 ರ್ಷದವಳಿದ್ದು ಅವಳು ಗೋದಿ ಬಣ್ಣ. ಉದ್ದ ಮುಖ. ಕಪ್ಪು ಕೂದಲು. ಕೆಂಪು ಬಣ್ಣದ ಪಂಜಾಬಿ ಬಟ್ಟೆ ಹಾಕಿಕೊಂಡಿದ್ದು ಇರುತ್ತದೆ. ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಔರಾದ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ :- 122/2022 ಕಲಂ. 87 ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ: 21/08/2022 ರಂದು 11:30 ಗಂಟೆಗೆ ಪಿ.ಎಸ್.ಐ ಔರಾದ ಬಿ ರವರು ಇಂದಿರಾನಗರ ತಾಂಡಾದ ಸೇವಾಲಾಲ ಮಂದಿರ ಹತ್ತಿರ ರಸ್ತೆಯ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರು ಕೀಶನ ತಂದೆ ವಿಶ್ವನಾಥ ಚೌಹಾಣ ಜೊತೆಯಲ್ಲಿ 6 ಜನರು ಸಾ: ಎಲ್ಲರು ಸಾ:ಇಂದಿರಾನಗರ ತಾಂಡಾ ತಾ: ಔರಾದ (ಬಿ) ಗುಂಪು ಕಟ್ಟಿಕೊಂಡು ಕಾನೂನು ಬಾಹೀರವಾಗಿ ಇಸ್ಪೀಟ ಜುಜಾಟ ಆಟದಲ್ಲಿ ತೊಡಗಿದಾಗ ಪಂಚರ ಸಮಕ್ಷದಲ್ಲಿ ಸಿಬ್ಬಂದಿ ಜನರ ಸಹಾಯದಿಂದ ದಾಳಿ ಮಾಡಿÀ ಹಿಡಿದ್ದು ಅವರನ್ನು ದಸ್ತಗಿರಿ ಮಾಡಿ ಜೂಜಾಟಕ್ಕೆ ಬಳಸಿದ 25000/- ರೂಪಾಯಿಗಳು ಹಾಗೂ 52 ಇಸ್ಪೀಟ ಕಾರ್ಡಗಳು ಜಪ್ತಿ ಮಾಡಿಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಂಡಿದ್ದು ಇರುತ್ತದೆ.